**ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ. ಚಿಕ್ಕಬಳ್ಳಾಪುರ**
**ಕಾರ್ಯಸ್ಥಾನ ಚಿಂತಾಮಣಿ**

ಸೇಷನ್ಸ್ ಕೇಸ್ ನಂಬ್ರ 45/2025

ಪಿರ್ಯಾದುದಾರರು ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ವೃತ್ತ ನಿರೀಕ್ಷಕರು
ಶಿಡ್ಲಘಟ್ಟ ಗ್ರಾಮಾಂತರ ಪೋಲಿಸ್ ಠಾಣೆ

**ವಿರುದ್ಧ**

ಆರೋಪಿ - ಕಿರಣ್

## ದೋಷಾರೋಪಣೆ

ಕಾಂತರಾಜು ಎಸ್.ವಿ., ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಚಿಕ್ಕಬಳ್ಳಾಪುರ ಕಾರ್ಯಸ್ಥಾನ ಚಿಂತಾಮಣಿ ಆದ ನಾನು ಈ ಪ್ರಕರಣದಲ್ಲಿ ಆರೋಪಿತರಾದ-

ಕಿರಣ್
ತಂದೆ ಲೇಟ್ ಮುನಿರಾಜು
ವಯಸ್ಸು 29 ವರ್ಷ
ವಾಸ: ಜಂಗಮಕೋಟೆ ಗ್ರಾಮ,
ಶಿಡ್ಲಘಟ್ಟ ತಾಲ್ಲೂಕು
ಚಿಕ್ಕಬಳ್ಳಾಪುರ ಜಿಲ್ಲೆ

ನಿಮ್ಮ ವಿರುದ್ಧ ಈ ಕೆಳಕಂಡಂತೆ ದೋಷಾರೋಪಣೆಯನ್ನು ಮಾಡುತ್ತಿದ್ದೇನೆ.

**ಮೊದಲನೇಯದಾಗಿ,** ಶಿಡ್ಲಘಟ್ಟ ಗ್ರಾಮಾಂತರ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಡುವ ಆರೋಪಿತನಾದ ನೀವು ಮೃತ ಮಂಜುನಾಥ ಹಾಗೂ ಚಾಸಾ-2 ಲಕ್ಷ್ಮೀ ರವರು ಗಂಡ-ಹೆಂಡತಿಯರಾಗಿದ್ದು, ಮೃತನಿಗೆ ಚಾಸಾ-2 ರವರು ಸ್ವಂತ ಅಕ್ಕನ ಮಗಳಾಗಿದ್ದು, ಸಂಬಂದಿಕರಾಗಿರುತ್ತಾರೆ. ಅವರಿಗೆ ಇಬ್ಬರು ಮಕ್ಕಳಿರುತ್ತಾರೆ. ಹೀಗೆ ಸುಮಾರು 5-6 ವರ್ಷಗಳಿಂದ ಮೃತನು ಹಾಗೂ ಚಾಸಾ-2

ರವರು ಸಂಸಾರದಲ್ಲಿ ಹೊಂದಾಣಿಕೆಯಾಗದೆ ಗಲಾಟೆಗಳು ಮಾಡಿಕೊಂಡಿದ್ದು, ಚಾಸಾ-2 ರವರು ತನ್ನ ಗಂಡ ಅಂದರೆ ಮೃತನನ್ನು ಬಿಟ್ಟು ಬೇರೊಂದು ಬಾಡಿಗೆ ಮನೆಯಲ್ಲಿ ತನ್ನ ಮಕ್ಕಳೊಂದಿಗೆ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ. ಮೃತನು ಜಂಗಮಕೋಟೆಯ ತನ್ನ ಮನೆಯಲ್ಲಿ ಒಬ್ಬನೇ ವಾಸವಾಗಿದ್ದನು. ಚಾಸಾ-2 ರವರ ತಮ್ಮ ಅಂದರೆ ತಾಯಿಯವರ ತಂಗಿ (ಚಿಕ್ಕಮ್ಮ) ಮಗನಾದ ಆರೋಪಿಯಾದ ನೀವು ಮೃತನಾದ ಮಂಜುನಾಥ ರವರು ತನ್ನ ದೊಡ್ಡಮ್ಮನ ಮಗಳು ಅಂದರೆ ಅಕ್ಕ ಚಾಸಾ-2 ರವರನ್ನು ಸಂಸಾರದಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ, ಬಿಟ್ಟು ಬಿಟ್ಟಿದ್ದಾನೆ, ಮಕ್ಕಳನ್ನು ನೋಡಿಕೊಳ್ಳುತ್ತಿಲ್ಲ, ಎಂದು ಮೃತನ ಮೇಲೆ ದ್ವೇಷ ಸಾಧಿಸಿ ಮೃತನ ಮೇಲೆ ಈ ಹಿಂದೆ ಹಲವಾರು ಬಾರಿ ಗಲಾಟೆ ಮಾಡಿದ್ದನು. ದಿನಾಂಕ:19-06-2025 ರಂದು ರಾತ್ರಿ ಸುಮಾರು 10-00 ಗಂಟೆಯಲಿ ಮೃತನು ಜಂಗಮಕೋಟೆಯ ತನ್ನ ಮನೆಯಲಿ ಒಬ್ಬನೇ ಇದ್ದಾಗ, ಆರೋಪಿಯಾದ ನೀವು ಮೃತನ ಮನೆಗೆ ಹೋಗಿ, ಮೇಲ್ಕಂಡ ದ್ವೇಷದಿಂದ ಮೃತನ ಮೇಲೆ ಗಲಾಟೆ ಮಾಡಿ, ಕೊಲೆ ಮಾಡುವ ಉದ್ದೇಶದಿಂದ ದೊಣ್ಣೆಯಿಂದ ಮೃತನ ತಲೆಗೆ, ಮುಖಕ್ಕೆ, ಎದೆಗೆ, ಬಲಕೈ ಗೆ, ಎರಡೂ ಕಾಲುಗಳಿಗೆ ಹೊಡೆದು ಹಲ್ಲೆ ಮಾಡಿದ್ದು, ಹಲ್ಲೆ ಮಾಡಿದ ದೆಸೆಯಿಂದ ಮೃತನಿಗೆ ರಕ್ತ ಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಆ ಮೂಲಕ ಭಾರತೀಯ ನ್ಯಾಯಾ ಸಂಹಿತೆ 103(1) ಕಲಂನ ಮೇರೆಗೆ ಆರೋಪಿತನಾದ ನೀವು ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಮತ್ತು ಮೇಲೆ ಹೇಳಿದ ಅಪರಾಧಿಗೆ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡುವಂತೆ ಆದೇಶಿಸಿರುತ್ತೇನೆ.

ದಿನಾಂಕ:25.07.2026

(ಕಾಂತರಾಜು ಎಸ್.ವಿ.)

2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ